

ಶ್ರೀ ಸರಸ್ವತಿ ವಿದ್ಯಾಮಂದಿರ ಮತ್ತು ಮಂಗಳ ವಿದ್ಯಾಕೇಂದ್ರ, ಮಾಗಡಿ



ಶ್ರೀ ವೀಣಾ ಮಕ್ಕಳ ಮಂದಿರ, ತ್ಯಾಮಗೊಂಡ್ಲು



ಶ್ರೀ ಮಂಗಳ ವಿದ್ಯಾಮಂದಿರ, ದೊಡ್ಡಬಳ್ಳಾಪುರ



ಶ್ರೀ ಗಾಯತ್ರಿ ವಿದ್ಯಾಮಂದಿರ, ಹೊಸಕೋಟೆ



ಶ್ರೀ ಶಾರದಾ ವಿದ್ಯಾಮಂದಿರ, ವರ್ತೂರು



ಶ್ರೀ ಹಂಸವಾಹಿನಿ ಮಕ್ಕಳ ಮಂದಿರ, ಕನಕಪುರ



ಮಂಗಳ ವಿದ್ಯಾಮಂದಿರ, ಯಲಹಂಕ



ಶ್ರೀ ಭಾರತಿ ವಿದ್ಯಾನಿಕೇತನ, ಅತ್ತಿಬೆಲೆ



# ಶ್ರೀ ಮಂಗಳ ಶಿಕ್ಷಣ ಸಮಿತಿ (ರಿ)

ಬೆಂಗಳೂರು ನಗರ, ಗ್ರಾಮಾಂತರ ಮತ್ತು ರಾಮನಗರ ಜಿಲ್ಲೆ.

www.srimangala.org Email: srimangala.bng@gmail.com

## ವಾರ್ಷಿಕ ವರದಿ 2020-21

ನಂ. 20, 'ಎ' ಸೆಕ್ಟರ್, ಸಂದೀಪ್ ಉನ್ನಿಕೃಷ್ಣನ್ ರಸ್ತೆ, ಯಲಹಂಕ ನ್ಯೂಟೌನ್,
ಬೆಂಗಳೂರು-64

## ಶ್ರೀ ಮಂಗಳ ಶಿಕ್ಷಣ ಸಮಿತಿಯು 1982–83 ರಲ್ಲಿ ಈ ಕೆಳಕಂಡ ಧ್ಯೇಯೋದ್ದೇಶಗಳೊಂದಿಗೆ ಪ್ರಾರಂಭವಾಯಿತು.

* ಭಾರತೀಯ ಪದ್ಧತಿಯ ಶಿಕ್ಷಣವನ್ನು ಪ್ರಚಾರ ಮಾಡುವುದು ಮತ್ತು ಅನುಷ್ಠಾನಕ್ಕೆ ತರುವುದು.
* ಪೂರ್ವ ಪ್ರಾಥಮಿಕ, ಹಿರಿಯ ಪ್ರಾಥಮಿಕ, ಪ್ರೌಢಶಾಲೆ ಮತ್ತು ಅಧ್ಯಾಪಕರ ತರಬೇತಿ ಕೇಂದ್ರಗಳು ಹಾಗು ತಾಂತ್ರಿಕ ಶಿಕ್ಷಣ ಸಂಸ್ಥೆಗಳನ್ನು ನಡೆಸುವುದು.
* ಮಕ್ಕಳಲ್ಲಿ ಸುಪ್ತವಾಗಿರುವ ಪ್ರತಿಭೆಯನ್ನು ಬೆಳಕಿಗೆ ತರಲು ಅವಶ್ಯಕವಾದ ಶಿಕ್ಷಣವನ್ನು ನೀಡುವುದು.
* ಸಾಂಸ್ಕೃತಿಕ, ಶೈಕ್ಷಣಿಕ, ಸಾಮಾಜಿಕ ವಿಚಾರಗಳ ಪ್ರಕಟಣೆಗಳನ್ನು ಹೊರತರುವುದು.
* ಮಕ್ಕಳಲ್ಲಿ ರಾಷ್ಟ್ರಾಭಿಮಾನವನ್ನು ಬೆಳೆಸಿ ರಾಷ್ಟ್ರದ ಯೋಗ್ಯ ನಾಗರೀಕರನ್ನಾಗಿ ಮಾಡುವುದು.
* ಸಾಂಸ್ಕೃತಿಕ, ಶೈಕ್ಷಣಿಕ, ಸಾಮಾಜಿಕ ವಿಷಯದ ಮೇಲೆ ವಿಚಾರ ಸಂಕೀರ್ಣ ಮತ್ತು ಚರ್ಚೆಗಳನ್ನು ನಡೆಸುವುದು.
* ಸಂಸ್ಥೆಯ ಧ್ಯೇಯ ಸಾಧನೆಗೆ ಅವಶ್ಯಕವಾದ ಕಾರ್ಯಕ್ರಮ ರೂಪಿಸಿ ಅದನ್ನು ಕಾರ್ಯಗತ ಮಾಡುವುದು.
* ಸಂಸ್ಥೆಯ ಧ್ಯೇಯಕ್ಕೆ ಅನುಗುಣವಾದ ವಿದ್ಯಾಸಂಸ್ಥೆಗಳನ್ನು ವಹಿಸಿಕೊಟ್ಟಲ್ಲಿ ಅವುಗಳನ್ನು ನಡೆಸುವುದು.

## ಶ್ರೀ ಮಂಗಳ ಶಿಕ್ಷಣ ಸಮಿತಿ ನಡೆಸುತ್ತಿರುವ ಶಾಲೆಗಳು

### ಪೂರ್ವ ಪ್ರಾಥಮಿಕ ಮತ್ತು ಹಿರಿಯ ಪ್ರಾಥಮಿಕ ಶಾಲೆಗಳು

1. ಶ್ರೀ ಸರಸ್ವತಿ ವಿದ್ಯಾಮಂದಿರ ಮತ್ತು ಮಂಗಳ ವಿದ್ಯಾಕೇಂದ್ರ, ಮಾಗಡಿ, ರಾಮನಗರ ಜಿಲ್ಲೆ.
2. ಶ್ರೀ ವೀಣಾ ಮಕ್ಕಳ ಮಂದಿರ, ತ್ಯಾಮಗೊಂಡ್ಲು, ನೆಲಮಂಗಲ ತಾ, ಬೆಂ.ಗ್ರಾ.
3. ಶ್ರೀ ಮಂಗಳ ವಿದ್ಯಾಮಂದಿರ, ದೊಡ್ಡಬಳ್ಳಾಪುರ, ಬೆಂ. ಗ್ರಾ. ಜಿಲ್ಲೆ.
4. ಶ್ರೀ ಗಾಯತ್ರಿ ವಿದ್ಯಾಮಂದಿರ, ಹೊಸಕೋಟೆ, ಬೆಂ. ಗ್ರಾ. ಜಿಲ್ಲೆ..
5. ಶ್ರೀ ಶಾರದ ವಿದ್ಯಾಮಂದಿರ, ವರ್ತೂರು, ಬೆಂ. ನಗರ ಜಿಲ್ಲೆ.





6. ಶ್ರೀ ಹಂಸವಾಹಿನಿ ಮಕ್ಕಳ ಮಂದಿರ, ಕನಕಪುರ, ರಾಮನಗರ ಜಿಲ್ಲೆ.
7. ಮಂಗಳ ವಿದ್ಯಾ ಮಂದಿರ, ಯಲಹಂಕ ನ್ಯೂಟೌನ್, ಬೆಂ. ನಗರ ಜಿಲ್ಲೆ.
8. ಶ್ರೀ ಭಾರತಿ ವಿದ್ಯಾನಿಕೇತನ, ಅತ್ತಿಬೆಲೆ, ಆನೇಕಲ್ ತಾ, ಬೆಂ. ನಗರ ಜಿಲ್ಲೆ.

### ಪ್ರೌಢ ಶಾಲೆಗಳು

1. ಶ್ರೀ ಸರಸ್ವತಿ ವಿದ್ಯಾಮಂದಿರ, ಮಾಗಡಿ, ರಾಮನಗರ ಜಿಲ್ಲೆ.
2. ಶ್ರೀ ಶಾರದಾ ವಿದ್ಯಾಮಂದಿರ, ವರ್ತೂರು, ಬೆಂ. ನಗರ ಜಿಲ್ಲೆ.
3. ಮಂಗಳ ವಿದ್ಯಾ ಮಂದಿರ, ಯಲಹಂಕ, ಬೆಂ. ನಗರ ಜಿಲ್ಲೆ.

## ಶ್ರೀ ಮಂಗಳ ಶಿಕ್ಷಣ ಸಮಿತಿ ಸಹಯೋಗದಲ್ಲಿ ನಡೆಯುತ್ತಿರುವ ಶಾಲೆಗಳು

### ಪೂರ್ವ ಪ್ರಾಥಮಿಕ ಮತ್ತು ಹಿರಿಯ ಪ್ರಾಥಮಿಕ ಶಾಲೆಗಳು

1. ಶ್ರೀ ಜ್ಞಾನವಾಹಿನಿ ವಿದ್ಯಾಕೇಂದ್ರ, ನೆಲಮಂಗಲ ಬೆಂ. ಗ್ರಾ. ಜಿಲ್ಲೆ.
2. ಸ್ವಾಮಿ ವಿವೇಕಾನಂದ ವಿದ್ಯಾಕೇಂದ್ರ, ಹೊಸಕೋಟೆ, ಬೆಂ. ಗ್ರಾ. ಜಿಲ್ಲೆ.
3. ಸ್ವಾಮಿ ವಿವೇಕಾನಂದ ಹೆಂಕ್ ಬ್ರೂನ ರೌಂಡ್‌ಟೇಬಲ್ ಸ್ಕೂಲ್, ದೊಡ್ಡಗಟ್ಟಿಗನಬ್ಬೆ, ಹೊಸಕೋಟೆ ತಾ, ಬೆಂ. ಗ್ರಾ. ಜಿಲ್ಲೆ.
4. ಶ್ರೀ ಗುರೂಜಿ ವಿದ್ಯಾಮಂದಿರ, ಆನೇಕಲ್, ಬೆಂ. ನಗರ ಜಿಲ್ಲೆ.
5. ಸೆಂಟ್‌ಪಾಲ್ ಕಾನ್ವೆಂಟ್, ಕೆ.ಪಿ. ಅಗ್ರಹಾರ, ಬೆಂಗಳೂರು.
6. ಶ್ರೀ ವಿವೇಕಾನಂದ ವಿದ್ಯಾನಿಕೇತನ, ನೆರಳೂರು, ಬೆಂ. ನಗರ ಜಿಲ್ಲೆ.

### ಪ್ರೌಢ ಶಾಲೆಗಳು

1. ಜ್ಞಾನವಾಹಿನಿ ವಿದ್ಯಾಕೇಂದ್ರ, ನೆಲಮಂಗಲ, ಬೆಂ. ಗ್ರಾ. ಜಿಲ್ಲೆ.
2. ಸ್ವಾಮಿ ವಿವೇಕಾನಂದ ವಿದ್ಯಾಕೇಂದ್ರ, ಹೊಸಕೋಟೆ, ಬೆಂ. ಗ್ರಾ. ಜಿಲ್ಲೆ.
3. ಸ್ವಾಮಿ ವಿವೇಕಾನಂದ ರೌಂಡ್‌ಟೇಬಲ್ ಸ್ಕೂಲ್, ದೊಡ್ಡಗಟ್ಟಿಗನಬ್ಬೆ, ಹೊಸಕೋಟೆ ತಾಲ್ಲೂಕು, ಬೆಂ. ಗ್ರಾ. ಜಿಲ್ಲೆ.
4. ಶ್ರೀ ಗುರೂಜಿ ವಿದ್ಯಾಮಂದಿರ, ಆನೇಕಲ್, ಬೆಂ. ನಗರ ಜಿಲ್ಲೆ.
5. ಶ್ರೀ ವಿವೇಕಾನಂದ ವಿದ್ಯಾನಿಕೇತನ, ನೆರಳೂರು, ಬೆಂ. ನಗರ ಜಿಲ್ಲೆ.
6. ಎಂ.ಇ.ಎಸ್. ಪ್ರೌಢಶಾಲೆ, ಮರಳವಾಡಿ, ಕನಕಪುರ ತಾ., ರಾಮನಗರ ಜಿಲ್ಲೆ.
7. ಮಾರುತಿ ಪ್ರೌಢಶಾಲೆ, ರಾಜಘಟ್ಟ, ದೊಡ್ಡಬಳ್ಳಾಪುರ ತಾ., ಬೆಂ. ಗ್ರಾ. ಜಿಲ್ಲೆ.

## ವಿಜ್ಞಾನ ಕಾರ್ಯಗಾರ

ದಿನಾಂಕ 16-06-2020 ಮಂಗಳವಾರದಂದು ಶ್ರೀ ಮಂಗಳ ಶಿಕ್ಷಣ ಸಮಿತಿಯ ವತಿಯಿಂದ ಆನ್‌ಲೈನ್ ತಂತ್ರಾಂಶದ ಮೂಲಕ 10ನೇ ತರಗತಿ ವಿದ್ಯಾರ್ಥಿಗಳಿಗೆ ವಿಜ್ಞಾನ ಕಾರ್ಯಗಾರವನ್ನು ಸಂಪನ್ಮೂಲ ವ್ಯಕ್ತಿಗಳಾದ ಶ್ರೀಯುತ ಟಿ.ಆರ್. ಜಗದೀಶ್‌ರವರು ನಡೆಸಿಕೊಟ್ಟರು. ಈ ಕಾರ್ಯಗಾರದಲ್ಲಿ 85 ಮಕ್ಕಳು ಭಾಗವಹಿಸಿದ್ದರು.




ಶ್ರೀ ಟಿ.ಆರ್. ಜಗದೀಶ್‌ರವರಿಂದ ವಿಜ್ಞಾನ ಕಾರ್ಯಗಾರ

## ಶಿಕ್ಷಕರ ದಿನಾಚರಣೆ

ದಿನಾಂಕ 05-09-2020 ರಂದು ಮಂಗಳ ವಿದ್ಯಾ ಮಂದಿರ, ಯಲಹಂಕ ಶಾಲೆಯಲ್ಲಿ ಮುಖ್ಯ ಶಿಕ್ಷಕರ ಬೈಠಕ್ ಮತ್ತು ಶಿಕ್ಷಕರ ದಿನಾಚರಣೆಯನ್ನು ಆಚರಣೆ ಮಾಡಲಾಯಿತು.



ಶ್ರೀ ಚಂದ್ರಶೇಖರ್‌ರವರು ರಾಧಾಕೃಷ್ಣನ್‌ರವರ ಜೀವನ ಪರಿಚಯ ಮಾಡಿದರು



ಶ್ರೀ ಮಂಗಳ ಶಿಕ್ಷಣ ಸಮಿತಿ (ರಿ)

## ಶಿಕ್ಷಕರಿಗೆ ಆನ್‌ಲೈನ್ ಕಲಿಕಾ ತರಬೇತಿ ಕಾರ್ಯಗಾರ

ದಿನಾಂಕ 10-09-2020 ರಂದು ಮಂಗಳ ವಿದ್ಯಾ ಮಂದಿರ, ಯಲಹಂಕ ಶಾಲೆಯಲ್ಲಿ ಶಿಕ್ಷಕರಿಗೆ ಆನ್‌ಲೈನ್ ಕಲಿಕಾ ತರಬೇತಿ ಕಾರ್ಯಗಾರವನ್ನು ನಡೆಸಲಾಯಿತು. ಈ ಕಾರ್ಯಗಾರದಲ್ಲಿ ಒಟ್ಟು 07 ಶಾಲೆಗಳಿಂದ 24 ಶಿಕ್ಷಕರು ಭಾಗವಹಿಸಿ ಗೂಗಲ್ ತಂತ್ರಾಂಶದ ಮೂಲಕ ಮಕ್ಕಳಿಗೆ ಪಾಠ ಬೋಧನಾ ವಿಧಾನದ ತರಬೇತಿಯನ್ನು ಪಡೆದುಕೊಂಡರು.




ಶ್ರೀ ತುಕಾರಾಮ್‌ರವರು ಶಿಕ್ಷಕರಿಗೆ ಆನ್‌ಲೈನ್ ಕಲಿಕಾ ಮಾರ್ಗದರ್ಶನ ನೀಡುತ್ತಿರುವುದು



ಆನ್‌ಲೈನ್ ಕಲಿಕಾ ಕಾರ್ಯಗಾರದಲ್ಲಿ ಪಾಲ್ಗೊಂಡ ಶಿಕ್ಷಕರು

## ಕಥಾ ಅವಧಿ

ದಿನಾಂಕ 28-09-2020 ರಂದು ಭಗತ್‌ಸಿಂಗ್ ಜನ್ಮ ದಿನಾಚರಣೆಯ ಪ್ರಯುಕ್ತ ಗೂಗಲ್‌ಮೀಟ್ ತಂತ್ರಾಂಶದ ಮೂಲಕ ಶ್ರೀ ಶಾರದಾ ವಿದ್ಯಾ ಮಂದಿರ, ವರ್ತೂರು ಶಾಲಾ ಶಿಕ್ಷಕಿಯಾದ ಶ್ರೀಮತಿ ನವಿತಾ ರಿಂದ 7ನೇ ತರಗತಿ ವಿದ್ಯಾರ್ಥಿಗಳಿಗೆ ಭಗತ್ ಸಿಂಗ್‌ರವರ ಜೀವನ ಪರಿಚಯದ ಕಥೆ ಹೇಳುವ ಕಾರ್ಯಕ್ರಮವನ್ನು ಶ್ರೀ ಮಂಗಳ ಶಿಕ್ಷಣ ಸಮಿತಿ ವತಿಯಿಂದ ಹಮ್ಮಿಕೊಳ್ಳಲಾಯಿತು. ಒಟ್ಟು 8 ಶಾಲೆಗಳಿಂದ 63 ವಿದ್ಯಾರ್ಥಿಗಳು ಭಾಗವಹಿಸಿದ್ದರು.



ವರ್ತೂರು ಶಾಲಾ ಶಿಕ್ಷಕಿಯಾದ ಶ್ರೀಮತಿ ನವಿತಾ ರಿಂದ ಕಥಾ ಕಾರ್ಯಕ್ರಮ

## ಜಿಲ್ಲಾ ಸಮಿತಿ ಪ್ರವಾಸ

ದಿನಾಂಕ 27-09-2020 ರಂದು ಶ್ರೀ ಮಂಗಳ ಶಿಕ್ಷಣ ಸಮಿತಿಯ ಜಿಲ್ಲಾ ಸಮಿತಿಯು ಶ್ರೀ ವೀಣಾ ಮಕ್ಕಳ ಮಂದಿರ, ತ್ಯಾಮಗೊಂಡ್ಲು ಶಾಲೆಗೆ ಭೇಟಿ ನೀಡಿ ಸ್ಥಾನೀಯ ಸಮಿತಿ ಹಾಗೂ ಶಿಕ್ಷಕರ ಬೈಠಕ್ ನಡೆಸಲಾಯಿತು.



ಶ್ರೀ ವೀಣಾ ಮಕ್ಕಳ ಮಂದಿರ ಶಾಲೆಯ ಬೈಠಕ್‌ನಲ್ಲಿ ಪಾಲ್ಗೊಂಡ ಜಿಲ್ಲಾ ಸಮಿತಿ





## ಲಾಲ್‌ಬಹದ್ದೂರ್‌ಶಾಸ್ತ್ರೀಯವರ ಜಯಂತಿ

ದಿನಾಂಕ 02-10-2020 ರಂದು ಲಾಲ್‌ಬಹದ್ದೂರ್‌ಶಾಸ್ತ್ರೀಜಿಯವರ ಜಯಂತಿ ಪ್ರಯುಕ್ತ ಶ್ರೀ ಹಂಸವಾಹಿನಿ ಮಕ್ಕಳ ಮಂದಿರ, ಕನಕಪುರ ಶಾಲಾ ಶಿಕ್ಷಕಿಯಾದ ಶ್ರೀಮತಿ ಸುಮಾರವರಿಂದ ಲಾಲ್‌ಬಹದ್ದೂರ್‌ಶಾಸ್ತ್ರೀಜಿಯವರ ಜೀವನ ಪರಿಚಯ ಕಥೆಯನ್ನು ಗೂಗಲ್ ಮೀಟ್ ತಂತ್ರಾಂಶದ ಮೂಲಕ ನಡೆಸಿಕೊಟ್ಟರು. ಈ ಅವಧಿಯಲ್ಲಿ 6ನೇ ತರಗತಿಯಿಂದ 56 ವಿದ್ಯಾರ್ಥಿಗಳು ಭಾಗವಹಿಸಿದ್ದರು.



ಶ್ರೀಮತಿ ಸುಮಾರವರಿಂದ ಕಥಾ ಕಾರ್ಯಕ್ರಮ

## ಇಸ್ರೋ ಸಂಸ್ಥೆ ವತಿಯಿಂದ ಚಿತ್ರಕಲಾ ಸ್ಪರ್ಧೆ

ದಿನಾಂಕ 07-10-2020 ರಂದು ಅಂತರಾಷ್ಟ್ರೀಯ ಬಾಹ್ಯಾಕಾಶ ದಿನದ ಪ್ರಯುಕ್ತ ಇಸ್ರೋ ಸಂಸ್ಥೆ ವತಿಯಿಂದ ಚಿತ್ರಕಲಾ ಸ್ಪರ್ಧೆಯನ್ನು ಏರ್ಪಡಿಸಲಾಗಿತ್ತು. ಈ ಸ್ಪರ್ಧೆಯಲ್ಲಿ 5 ಶಾಲೆಗಳಿಂದ 20 ವಿದ್ಯಾರ್ಥಿಗಳು ಭಾಗವಹಿಸಿದ್ದರು.



ಮಂಗಳ ವಿದ್ಯಾ ಮಂದಿರ, ಯಲಹಂಕ ಶಾಲೆಯ ವಿದ್ಯಾರ್ಥಿನಿ ಭವ್ಯಶ್ರೀ ಬಿಡಿಸಿದ ಚಿತ್ರ

## ಮಹರ್ಷಿ ವಾಲ್ಮೀಕಿ ಜಯಂತಿ

ದಿನಾಂಕ 30-10-2020 ರ ಶುಕ್ರವಾರದಂದು ವಾಲ್ಮೀಕಿ ಜಯಂತಿ ಪ್ರಯುಕ್ತ ಶ್ರೀ ಮಂಗಳ ವಿದ್ಯಾ ಮಂದಿರ, ಯಲಹಂಕ ಶಾಲೆಯ ಶಿಕ್ಷಕಿಯಾದ ಶ್ರೀಮತಿ ಮಾನಸ ವಿನೋದ್‌ರವರು ಗೂಗಲ್ ತಂತ್ರಾಂಶದ ಮೂಲಕ 9ನೇ ತರಗತಿಯ 56 ವಿದ್ಯಾರ್ಥಿಗಳಿಗೆ ಮಹರ್ಷಿ ವಾಲ್ಮೀಕಿಯವರ ಜೀವನ ಚರಿತ್ರೆಯ ಕಥಾ ಕಾರ್ಯಕ್ರಮವನ್ನು ನಡೆಸಿಕೊಟ್ಟರು.




ಶ್ರೀಮತಿ ಮಾನಸ ವಿನೋದ್‌ರವರಿಂದ ಕಥಾ ನಿರೂಪಣೆ

## ಸರ್ವ ಸದಸ್ಯರ ಸಭೆ

ದಿನಾಂಕ 15-11-2020 ರಂದು ಶ್ರೀ ಮಂಗಳ ಶಿಕ್ಷಣ ಸಮಿತಿಯ ವಾರ್ಷಿಕ ಸಭೆಯನ್ನು ಮಂಗಳ ವಿದ್ಯಾ ಮಂದಿರ, ಯಲಹಂಕ ಶಾಲೆಯಲ್ಲಿ ಅಧ್ಯಕ್ಷರಾದ ಶ್ರೀ . ಹೊ. ಭೈರಪ್ಪನವರ ಅಧ್ಯಕ್ಷತೆಯಲ್ಲಿ ನಡೆಸಲಾಯಿತು. ಸಮಿತಿಯ ಎಲ್ಲಾ ಸದಸ್ಯರು ಪಾಲ್ಗೊಂಡಿದ್ದರು ಮತ್ತು ದೀಪಾವಳಿ ಪೂಜಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.



ಸರ್ವ ಸದಸ್ಯರ ಸಭೆಯಲ್ಲಿ ಪಾಲ್ಗೊಂಡ ಸದಸ್ಯರು







ಸರ್ವ ಸದಸ್ಯರ ಸಭೆಯಲ್ಲಿ ಪಾಲ್ಗೊಂಡ ಪದಾಧಿಕಾರಿಗಳು



ಜಿಲ್ಲಾ ಸಮಿತಿ ಕಛೇರಿಯಲ್ಲಿ ದೀಪಾವಳಿ ಪೂಜಾ ಕಾರ್ಯಕ್ರಮ

## ನವರಾತ್ರಿ ಗೊಂಬೆಗಳ ಪ್ರದರ್ಶನ ಸ್ಪರ್ಧೆ

ನವರಾತ್ರಿ ಪ್ರಯುಕ್ತ ಶ್ರೀ ಮಂಗಳ ಶಿಕ್ಷಣ ಸಮಿತಿಯಿಂದ ಮಕ್ಕಳಿಗೆ ಮನೆಗಳಲ್ಲಿ ಗೊಂಬೆಗಳ ಪ್ರದರ್ಶನ ಸ್ಪರ್ಧೆಯನ್ನು ಏರ್ಪಡಿಸಲಾಯಿತು. 8 ಶಾಲೆಗಳಿಂದ 15 ವಿದ್ಯಾರ್ಥಿಗಳು ಭಾಗವಹಿಸಿದ್ದರು.



ಲೇಖನ 2ನೇ ತರಗತಿ ಶ್ರೀ ಹಂಸವಾಹಿನಿ ಮಕ್ಕಳ ಮಂದಿರ, ಕನಕಪುರ



ನಂದನ್ ಆರ್. ರಾವ್ 6ನೇ ತರಗತಿ ಮಂಗಳ ವಿದ್ಯಾ ಮಂದಿರ, ಯಲಹಂಕ





## ಝಾನ್ಸಿರಾಣಿ ಲಕ್ಷ್ಮೀಬಾಯಿ ಕಥಾ ಕಾರ್ಯಕ್ರಮ

ದಿನಾಂಕ 19-11-2020 ರ ಗುರುವಾರದಂದು ಝಾನ್ಸಿರಾಣಿ ಲಕ್ಷ್ಮೀಬಾಯಿ ರವರ ಜನ್ಮ ದಿನಾಚರಣೆಯ ಪ್ರಯುಕ್ತ ಗೂಗಲ್ ತಂತ್ರಾಂಶದ ಮೂಲಕ 5ನೇ ತರಗತಿಯ ವಿದ್ಯಾರ್ಥಿಗಳಿಗೆ ಶ್ರೀ ವೀಣಾ ಮಕ್ಕಳ ಮಂದಿರ, ತ್ಯಾಮಗೊಂಡ್ಲು ಶಾಲೆಯ ಶಿಕ್ಷಕರಾದ ಶ್ರೀಯುತ ನರಸಿಂಹಮೂರ್ತಿರವರು ಕಥಾ ಅವಧಿಯನ್ನು ನಡೆಸಿಕೊಟ್ಟರು. 8 ಶಾಲೆಗಳಿಂದ 73 ವಿದ್ಯಾರ್ಥಿಗಳು ಭಾಗವಹಿಸಿದ್ದರು.




ಶ್ರೀ ವೀಣಾ ಮಕ್ಕಳ ಮಂದಿರ ಶಾಲೆಯ ಸಹ ಶಿಕ್ಷಕರಾದ ಶ್ರೀಯುತ ನರಸಿಂಹಮೂರ್ತಿಯವರಿಂದ ಕಥಾ ಅವಧಿ

## ಜಿಲ್ಲಾ ಮಟ್ಟದ ಸಾಂಸ್ಕೃತಿಕ ಕಾರ್ಯಕ್ರಮ

ದಿನಾಂಕ 20-11-2020 ರಂದು ಶ್ರೀ ಮಂಗಳ ಶಿಕ್ಷಣ ಸಮಿತಿ ವತಿಯಿಂದ ಚಿತ್ರಕಲೆ, ಭಗವದ್ಗೀತೆ, ದೇಶಭಕ್ತಿ ಗೀತೆ ಸ್ಪರ್ಧೆಗಳನ್ನು ಏರ್ಪಡಿಸಲಾಗಿತ್ತು. ಚಿತ್ರಕಲಾ ಸ್ಪರ್ಧೆಗೆ 7 ಶಾಲೆಗಳಿಂದ 19 ವಿದ್ಯಾರ್ಥಿಗಳು, ಭಗವದ್ಗೀತೆ ಸ್ಪರ್ಧೆಗೆ 6 ಶಾಲೆಗಳಿಂದ 18 ವಿದ್ಯಾರ್ಥಿಗಳು ಹಾಗೂ ದೇಶಭಕ್ತಿ ಗೀತೆ ಸ್ಪರ್ಧೆಗೆ 4 ಶಾಲೆಗಳಿಂದ 16 ವಿದ್ಯಾರ್ಥಿಗಳು ಭಾಗವಹಿಸಿದ್ದರು. ಶ್ರೀಮತಿ ಪದ್ಮಾವತಿ ಆರ್.ಜಿ. ಮತ್ತು ಶ್ರೀದರ್ಶನ್ ಕೆ. ರವರು ತೀರ್ಪುಗಾರರಾಗಿ ಕಾರ್ಯಕ್ರಮ ಯಶಸ್ವಿಯಾಗಿ ನಡೆಸಿಕೊಟ್ಟರು.

ಭಗವದ್ಗೀತೆ ಸ್ಪರ್ಧೆಯಲ್ಲಿ ಪ್ರಥಮ ಯಲಹಂಕ ಶಾಲೆ, ದ್ವಿತೀಯ ಮಾಗಡಿ ಶಾಲೆ, ತೃತೀಯ ತ್ಯಾಮಗೊಂಡ್ಲು ಶಾಲೆ, ಹಾಗೂ ದೇಶಭಕ್ತಿ ಗೀತೆ ಸ್ಪರ್ಧೆಯಲ್ಲಿ ಪ್ರಥಮ ಯಲಹಂಕ ಶಾಲೆ ಮತ್ತು ಚಿತ್ರಕಲಾ ಸ್ಪರ್ಧೆಯಲ್ಲಿ ಕನಕಪುರ ಶಾಲೆ ಪ್ರಥಮ ಸ್ಥಾನವನ್ನು ಪಡೆದುಕೊಂಡಿತು.



ಜಿಲ್ಲಾ ಮಟ್ಟದ ಭಗವದ್ಗೀತೆ ಸ್ಪರ್ಧೆಯಲ್ಲಿ ಪಾಲ್ಗೊಂಡ ಕನಕಪುರ ಶಾಲೆ ವಿದ್ಯಾರ್ಥಿನಿ



ಜಿಲ್ಲಾ ಮಟ್ಟದ ಚಿತ್ರಕಲೆ ಸ್ಪರ್ಧೆಯನ್ನು ವೀಕ್ಷಿಸುತ್ತಿರುವ ಶ್ರೀ ಶಿವರಾಂ ಶೆಟ್ಟಿ ಜಿ.ರವರು





## ಜಗದೀಶ್‌ಚಂದ್ರಬೋಸ್ ರವರ ಕಥಾ ಅವಧಿ

ದಿನಾಂಕ 28–11–2020 ರ ಶನಿವಾರದಂದು ಜಗದೀಶ್‌ಚಂದ್ರಬೋಸ್‌ರವರ ಜನ್ಮ ದಿನಾಚರಣೆ ಪ್ರಯುಕ್ತ ಶ್ರೀ ಮಂಗಳ ವಿದ್ಯಾ ಮಂದಿರ, ದೊಡ್ಡಬಳ್ಳಾಪುರ ಶಾಲೆಯ ಶಿಕ್ಷಕರಾದ ಶ್ರೀ ಪಿ.ವಿ. ಸುರೇಶ್‌ಬಾಬುರವರು ಗೂಗಲ್ ತಂತ್ರಾಂಶದ ಮೂಲಕ ಕಥಾ ಕಾರ್ಯಕ್ರಮವನ್ನು 8ನೇ ತರಗತಿ ವಿದ್ಯಾರ್ಥಿಗಳಿಗೆ ನಡೆಸಿಕೊಟ್ಟರು. ಒಟ್ಟು 75 ವಿದ್ಯಾರ್ಥಿಗಳು ಭಾಗವಹಿಸಿದ್ದರು.




ಶ್ರೀ ಪಿ.ವಿ. ಸುರೇಶ್‌ಬಾಬುರವರಿಂದ ಕಥಾ ಕಾರ್ಯಕ್ರಮ

## ಗುರುನಾನಕ್ ಜಯಂತಿ

ದಿನಾಂಕ 30–11–2020 ರ ಸೋಮವಾರದಂದು ಗುರುನಾನಕ್ ಜಯಂತಿ ಪ್ರಯುಕ್ತ ಗೂಗಲ್ ತಂತ್ರಾಂಶದ ಮೂಲಕ ಜೀವನ ಚರಿತ್ರೆಯ ಕಥಾ ಕಾರ್ಯಕ್ರಮವನ್ನು ಶ್ರೀ ಸರಸ್ವತಿ ವಿದ್ಯಾ ಮಂದಿರ ಪ್ರೌಢಶಾಲೆ, ಮಾಗಡಿ ಶಾಲೆಯ ಶಿಕ್ಷಕರಾದ ಶ್ರೀ ಹೆಚ್.ಜೆ. ಮಾದೇಶ್‌ರವರು 7ನೇ ತರಗತಿ ವಿದ್ಯಾರ್ಥಿಗಳಿಗೆ ನಡೆಸಿಕೊಟ್ಟರು. ಒಟ್ಟು 80 ವಿದ್ಯಾರ್ಥಿಗಳು ಭಾಗವಹಿಸಿದ್ದರು.




ಶ್ರೀ ಮಾದೇಶ್ ಹೆಚ್.ಜೆ. ರವರಿಂದ ಕಥಾ ಕಾರ್ಯಕ್ರಮ

## ಕನಕದಾಸ ಜಯಂತಿ ಕಥಾ ಅವಧಿ

ದಿನಾಂಕ 03-12-2020 ರ ಗುರುವಾರದಂದು ಕನಕದಾಸ ಜಯಂತಿ ಪ್ರಯುಕ್ತ ಶಿಕ್ಷಕರಿಗೆ ಗೂಗಲ್ ತಂತ್ರಾಂಶದ ಮೂಲಕ ಕನಕದಾಸರ ಜೀವನ ಚರಿತ್ರೆಯ ಕಥಾ ಕಾರ್ಯಕ್ರಮವನ್ನು ಮಂಗಳ ವಿದ್ಯಾ ಮಂದಿರ, ಯಲಹಂಕ ಶಾಲೆಯ ಶಿಕ್ಷಕಿಯಾದ ಶ್ರೀಮತಿ ಅಂಜಲಿ ಕುಲಕರ್ಣಿರವರು ನಡೆಸಿಕೊಟ್ಟರು. ಒಟ್ಟು 46 ಶಿಕ್ಷಕರು ಭಾಗವಹಿಸಿದ್ದರು.




ಶ್ರೀಮತಿ ಅಂಜಲಿ ಕುಲಕರ್ಣಿ ರವರಿಂದ ಕಥಾ ಕಾರ್ಯಕ್ರಮ

## ಶಾಲಾ ಪ್ರಾರಂಭೋತ್ಸವ

ದಿನಾಂಕ 01-01-2021 ರಂದು ಕೊರೊನಾ ರೋಗದ ಹರಡುವಿಕೆ ಕುಗ್ಗಿದ ನಂತರ ಶಾಲೆಗೆ ಮರಳಿದ ವಿದ್ಯಾರ್ಥಿಗಳಿಗೆ ಸಾಮಾಜಿಕ ಅಂತರ, ಕೈಗಳನ್ನು ಸಾಬೂನು ಅಥವಾ ಸ್ಯಾನಿಟೈಸರ್‌ನಿಂದ ಸ್ವಚ್ಛಗೊಳಿಸಿಕೊಳ್ಳುವುದು, ಕಡ್ಡಾಯವಾಗಿ ಮಾಸ್ಕ್ ಧರಿಸುವುದು ಮುಂತಾದ ಸೂಚನೆಗಳನ್ನು ಅನುಸರಿಸುವುದರೊಂದಿಗೆ ಪಾಳಿ ಪದ್ಧತಿಯಲ್ಲಿ ಶಾಲೆಯನ್ನು ನಡೆಸಲಾಯಿತು.





## ಮಕ್ಕಳ ಸುರಕ್ಷತಾ ದೃಷ್ಟಿಯಿಂದ ಶಾಲಾ ತರಗತಿ ಕೊಠಡಿಗಳಲ್ಲಿ ಸಾಮಾಜಿಕ ಅಂತರ ಪಾಲನೆ



ಶ್ರೀ ಸರಸ್ವತಿ ವಿದ್ಯಾ ಮಂದಿರ ಪ್ರಾಥಮಿಕ ವಿಭಾಗ, ಮಾಗಡಿ



ಶ್ರೀ ಸರಸ್ವತಿ ವಿದ್ಯಾ ಮಂದಿರ ಪ್ರೌಢಶಾಲೆ, ಮಾಗಡಿ



ಶ್ರೀ ವೀಣಾ ಮಕ್ಕಳ ಮಂದಿರ, ತ್ಯಾಮಗೊಂಡ್ಲು



ಶ್ರೀ ಮಂಗಳ ವಿದ್ಯಾ ಮಂದಿರ, ದೊಡ್ಡಬಳ್ಳಾಪುರ







ಶ್ರೀ ಗಾಯತ್ರಿ ವಿದ್ಯಾ ಮಂದಿರ, ಹೊಸಕೋಟೆ



ಶ್ರೀ ಶಾರದಾ ವಿದ್ಯಾ ಮಂದಿರ, ವರ್ತೂರು



ಶ್ರೀ ಹಂಸವಾಹಿನಿ ಮಕ್ಕಳ ಮಂದಿರ, ಕನಕಪುರ




ಮಂಗಳ ವಿದ್ಯಾ ಮಂದಿರ, ಯಲಹಂಕ








ಜ್ಞಾನವಾಹಿನಿ ವಿದ್ಯಾ ಕೇಂದ್ರ, ನೆಲಮಂಗಲ




ಸೆಂಟ್‌ಪಾಲ್ ಕಾನ್ವೆಂಟ್, ವಿಜಯನಗರ

## ಸ್ವಾಮಿ ವಿವೇಕಾನಂದ ಜಯಂತಿ

ದಿನಾಂಕ 12–01–2021 ರ ಮಂಗಳವಾರದಂದು ಸ್ವಾಮಿ ವಿವೇಕಾನಂದರ ಜಯಂತಿ ಪ್ರಯುಕ್ತ ಡಾ. ಕರುಣಾಕರ್ ರೈ ರವರು ಗೂಗಲ್ ತಂತ್ರಾಂಶದ ಮೂಲಕ ಸ್ವಾಮಿ ವಿವೇಕಾನಂದರ ಕುರಿತು ಶಿಕ್ಷಕರಿಗೆ ವಿಷಯ ಮಂಡನೆಯನ್ನು ನಿರೂಪಿಸಿದರು. 8 ಶಾಲೆಗಳಿಂದ 63 ಶಿಕ್ಷಕರು ಭಾಗವಹಿಸಿದ್ದರು.




ಡಾ. ಕರುಣಾಕರ್ ರೈ ರವರಿಂದ ವಿಷಯ ಮಂಡನೆ

## ಜಿಲ್ಲಾ ಸಮಿತಿ ಸದಸ್ಯರಿಂದ ಶಾಲಾ ಪ್ರವಾಸ

ದಿನಾಂಕ 26–01–2021 ರಂದು 72ನೇ ಗಣರಾಜ್ಯೋತ್ಸವ ದಿನದ ಪ್ರಯುಕ್ತ ಶ್ರೀ ಮಂಗಳ ಶಿಕ್ಷಣ ಸಮಿತಿಯ ಜಿಲ್ಲಾ ಅಧ್ಯಕ್ಷರಾದ ಶ್ರೀ . ಹೊ. ಬೈರಪ್ಪನವರು ಹಾಗೂ ಸದಸ್ಯರು ಶಾಲೆಗಳಿಗೆ ಪ್ರವಾಸ ಕೈಗೊಂಡು ಆಯಾ ಶಾಲೆಗಳಲ್ಲಿ ಗಣರಾಜ್ಯೋತ್ಸವ ದಿನಾಚರಣೆಯನ್ನು ಆಚರಿಸಲಾಯಿತು.



ಶ್ರೀ ಶಿವರಾಂ ಶೆಟ್ಟರವರಿಂದ ಶ್ರೀ ಸರಸ್ವತಿ ವಿದ್ಯಾ ಮಂದಿರ ಶಾಲೆಗೆ ಪ್ರವಾಸ







ಶ್ರೀ ಎ. ವೆಂಟಕೇಶ್‌ರವರಿಂದ ಶ್ರೀ ವೀಣಾ ಮಕ್ಕಳ ಮಂದಿರ ಶಾಲೆಗೆ ಪ್ರವಾಸ



ಶ್ರೀ ಸುಬ್ಬಣ್ಣರವರಿಂದ ಶ್ರೀ ಮಂಗಳ ವಿದ್ಯಾ ಮಂದಿರ ಶಾಲೆಗೆ ಪ್ರವಾಸ




ಶ್ರೀ ವೈ.ಕೆ. ಮಂಜುನಾಥ್ ಹಾಗೂ ಶ್ರೀ ಕೆ.ಎನ್. ಸತೀಶ್‌ರವರಿಂದ ಶ್ರೀ ಶಾರದಾ ವಿದ್ಯಾ ಮಂದಿರ ಶಾಲೆಗೆ ಪ್ರವಾಸ




ಶ್ರೀ ಹೊ. ಭೈರಪ್ಪ ಹಾಗೂ ಶ್ರೀಮತಿ ಭುವನೇಶ್ವರಿರವರಿಂದ ಶ್ರೀ ಹಂಸವಾಹಿನಿ ಮಕ್ಕಳ ಮಂದಿರ ಶಾಲೆಗೆ ಪ್ರವಾಸ



ಶ್ರೀ ಮಂಗಳ ಶಿಕ್ಷಣ ಸಮಿತಿ (ರಿ)



ಶ್ರೀ ರಮೇಶ್ ಹಾಗೂ ಶ್ರೀ ಶ್ರೀದರ್ಶನ್‌ರವರಿಂದ ಮಂಗಳ ವಿದ್ಯಾ ಮಂದಿರ ಶಾಲೆಗೆ ಪ್ರವಾಸ

## ಅಯೋಧ್ಯ ಶ್ರೀ ರಾಮ ಮಂದಿರ ನಿರ್ಮಾಣ ನಿಧಿ ಸಮರ್ಪಣಾ ಅಭಿಯಾನ

ಶ್ರೀ ಮಂಗಳ ಶಿಕ್ಷಣ ಸಮಿತಿ ನಡೆಸುತ್ತಿರುವ ಶಾಲೆಗಳ ಶಿಕ್ಷಕರು ಅಯೋಧ್ಯ ಶ್ರೀ ರಾಮ ಮಂದಿರ ನಿರ್ಮಾಣ ನಿಧಿ ಸಮರ್ಪಣಾ ಅಭಿಯಾನದಲ್ಲಿ ಪಾಲ್ಗೊಂಡಿದ್ದರು.



ಶ್ರೀ ರಾಮ ಮಂದಿರ ನಿರ್ಮಾಣ ನಿಧಿ ಸಮರ್ಪಣಾ ಅಭಿಯಾನದಲ್ಲಿ ಪಾಲ್ಗೊಂಡ ಮಾಗಡಿ ಶಾಲಾ ಸಿಬ್ಬಂದಿ



ಶ್ರೀ ರಾಮ ಮಂದಿರ ನಿರ್ಮಾಣ ನಿಧಿ ಸಮರ್ಪಣಾ ಅಭಿಯಾನದಲ್ಲಿ ಪಾಲ್ಗೊಂಡ ತ್ಯಾಮಗೊಂಡ್ಲು ಶಾಲಾ ಸಿಬ್ಬಂದಿ



ಶ್ರೀ ರಾಮ ಮಂದಿರ ನಿರ್ಮಾಣ ನಿಧಿ ಸಮರ್ಪಣಾ ಅಭಿಯಾನದಲ್ಲಿ ಪಾಲ್ಗೊಂಡ ದೊಡ್ಡಬಳ್ಳಾಪುರ ಶಾಲಾ ಸಿಬ್ಬಂದಿ



ಶ್ರೀ ಮಂಗಳ ಶಿಕ್ಷಣ ಸಮಿತಿ (ರಿ)



ಶ್ರೀ ರಾಮ ಮಂದಿರ ನಿರ್ಮಾಣ ನಿಧಿ ಸಮರ್ಪಣಾ ಅಭಿಯಾನದಲ್ಲಿ ಪಾಲ್ಗೊಂಡ ವರ್ತೂರು ಶಾಲಾ ಸಿಬ್ಬಂದಿ



ಶ್ರೀ ರಾಮ ಮಂದಿರ ನಿರ್ಮಾಣ ನಿಧಿ ಸಮರ್ಪಣಾ ಅಭಿಯಾನದಲ್ಲಿ ಪಾಲ್ಗೊಂಡ ಕನಕಪುರ ಶಾಲಾ ಸಿಬ್ಬಂದಿ

ಓಂ

# ಅರ್ಪಣೆ



ಸ್ವರ್ಗೀಯ **ಅಜಿತ್‌ಕುಮಾರ್**

ನಿರ್ದೇಶಕರು, ಹಿಂದೂ ಸೇವಾ ಪ್ರತಿಷ್ಠಾನ

ಪ್ರೇರಕರು, ಶ್ರೀ ಮಂಗಳ ಶಿಕ್ಷಣ ಸಮಿತಿ (ರಿ)



# ಶ್ರೀ ಮಂಗಳ ಶಿಕ್ಷಣ ಸಮಿತಿ (ರಿ)

## ಎಸ್.ಎಸ್.ಎಲ್.ಸಿ. ಪ್ರತಿಭಾನ್ವಿತ ವಿದ್ಯಾರ್ಥಿಗಳು


ಪುನೀತ್ ಕೆ.


ಮೇಘರಾಜ್ ಎಂ.ಹೆಚ್.


ರೀನಾ ದೇವಿ


ಅನನ್ಯ ಬಿ.ಪಿ.


ಚೇತನ್. ಜಿ.


ಯರ್ರದಿಮ್ಮ ದಿವ್ಯಶ್ರೀ


ಯಾರಬ್


ತನುಶ್ರೀ


ಸ್ವಾತಿ ಎಂ.ಕೆ.


ಭವಾನಿ. ಎಸ್. ಬಡಿಗೇರ್


ರಮ್ಯಶ್ರೀ ಎನ್.


ಮನೋಜ್ ಕೆ.ಎಸ್.

## ನಿಮ್ಮ ಭವಿಷ್ಯ ಉಜ್ವಲವಾಗಿರಲಿ, ಅಭಿನಂದನೆಗಳು

* ಗುರುಗಳ ಸನ್ನಿಧಿಯಲ್ಲಿ ಯಾವಾಗಲೂ ವಿನಯದಿಂದಲೇ ಇರಬೇಕು. ಅತಿ ಶ್ರೇಷ್ಠರು ಶ್ರೀ ಪರಮಾತ್ಮನ ಸಾಕಾರ ಮೂರ್ತಿಯನ್ನು ಸೃಷ್ಟೀಕರಿಸುವವರೇ ಗುರುಗಳು.

– ಚಾಣಕ್ಯ